ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ 7ನೇ ಸೆಪ್ಟೆಂಬರ್ 1995ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **ಶ್ರೀ ರಮೇಶ್ ಕುಮಾರ್** ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯಿಂದ ಕಾಂಟ್ರಾಕ್ಟ್ ಲೈಸನ್ಸ್ ಕೋರಿದ ಅರ್ಜಿಗಳು

2044- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1994-95ನೇ ಸಾಲಿನಲ್ಲಿ ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಲ್ಲಿ ಕಾಂಟ್ರಾಕ್ಟ್ ಲೈಸೆನ್ಸ್ ಕೋರಿದ ಅರ್ಜಿದಾರರ ಸಂಖ್ಯೆ ಎಷ್ಟು?*

ಆ) *ಇವುಗಳ ಪೈಕಿ ಬಾಕಿ ಇಟ್ಟಿರುವ ಸಂಖ್ಯೆ ಎಷ್ಟು? (ಪಟ್ಟಿ ನೀಡುವುದು)*

ಇ) *ಈ ಅರ್ಜಿದಾರರಿಗೆ ಕಾಂಟ್ರಾಕ್ಟ್ ಲೈಸೆನ್ಸ್ ನೀಡಲು ಬೇಕಾಗುವ ಅವಧಿ ಎಷ್ಟು?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 181

ಆ)1) ನೋಂದಾವಣೆಗಾಗಿ ಮೂಲ ಮಾಲೀಕರಿಂದ ಬಂದ ಅರ್ಜಿಗಳಾವುವು ಬಾಕಿ ಇರುವುದಿಲ್ಲ.

2) ಹೊಸದಾಗಿ ಲೈಸೆನ್ಸ್‌ಗಾಗಿ ಗುತ್ತಿಗೆದಾರರಿಂದ ಬಂದ ಅರ್ಜಿಗಳ ಪೈಕಿ ಬಾಕಿ ಇರುವ ಅರ್ಜಿಗಳು ಈ ಕೆಳಕಂಡಂತೆ ಇವೆ.

1) ಶ್ರೀ ಎಂ. ವೆಂಕಟೇಶ್, ಶಿವಮೊಗ್ಗ ಸ್ಟೀಲ್ಸ್ ಕೆಆರ್‌ಎಸ್ ರಸ್ತೆ, ಮೈಸೂರು.
2) ಶ್ರೀ ಬೋರಯ್ಯ, ಮೈಶುಗರ್ ಕಂಪೆನಿ ಮಂಡ್ಯ
3) ಶ್ರೀ ಎಸ್. ಕೆಂಪರಾಜು ಬಿನ್ ನಂಜಪ್ಪ, ಶಿವಮೊಗ್ಗ ಸ್ಟೀಲ್ಸ್ ಮೈಸೂರು.
4) ಸುಭಾಷ್, ಸನ್ ಆಫ್ ಕುಳ್ಳೇಗೌಡ, ಶಿವಮೊಗ್ಗ ಸ್ಟೀಲ್ಸ್, ಮೈಸೂರು
5) ಸಿಚ್ವಾಚಾರಿ, ಶಿವಮೊಗ್ಗ ಸ್ಟೀಲ್ಸ್ ಮೈಸೂರು
6) ರವಿಶಂಕರ್ ಪ್ರಿಸಿಷನ್ ಅಂಡ್ ಪ್ಯಾನೆಲ್ ವರ್ಕ್ಸ್ ನಂಜನಗೂಡು
7) ಶ್ರೀ ಕಾಳೇಗೌಡ, ಶಿವಮೊಗ್ಗ ಸ್ಟೀಲ್ಸ್ ಮೈಸೂರು
8) ಶ್ರೀ ಬಿ.ಎಂ. ಮಾಲೇಗೌಡ, ದನ್‌ಫೋರ್ಡ್ ಫ್ಯಾಬ್ರಿಕ್ಸ್, ತಾಂಡವಪುರ, ನಂಜನಗೂಡು

3) ಲೈಸೆನ್ಸ್ ನವೀಕರಣಕ್ಕಾಗಿ ಬಾಕಿ ಇರುವ ಅರ್ಜಿಗಳು

1) ಎಸ್‌ವಿ ಇಂಜಿನಿಯರ್ಸ್, ವಿಕ್ರಾಂತ್ ಟೈರ್ಸ್ ಮೈಸೂರು

2) ನಟೇಶಮೂರ್ತಿ, ಬಿಇಎಂಎಲ್, ಮೈಸೂರು

3) ದೊರೆಸ್ವಾಮಿ, ಶಿವಮೊಗ್ಗ ಸ್ಟೀಲ್, ಮೈಸೂರು

ಇ) ಅವಶ್ಯಕವಾದ ಎಲ್ಲಾ ಮಾಹಿತಿಯನ್ನು ಅರ್ಜಿದಾರರು ಒದಗಿಸಿದರೆ, ಒಂದು ವಾರ ಅವಧಿ ಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ನಾನು ಅದರಲ್ಲಿ ಸ್ಪಷ್ಟೀಕರಣ ಮಾತ್ರ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. 181 ಅಪ್ಲಿಕೇಷನ್ಸ್ 1994-95ರಲ್ಲಿ ಬಂದಿರತಕ್ಕಂಥದ್ದು. ಅದು ನಿಮ್ಮಲ್ಲಿ ಪೆಂಡಿಂಗ್ಸ್ ಯಾವುದೂ ಇಲ್ಲ, ಎಲ್ಲವನ್ನೂ ಕೊಟ್ಟಿದ್ದೇವೆ ಎಂಬ ಮಾತನ್ನು ಹೇಳಿದ್ದೀರಿ. ಸಂತೋಷ ಕೊಟ್ಟಿದ್ದರೆ. ಈಗ ತಾವು ಲೈಸನ್ಸ್ ಕೊಡಬೇಕಾದರೆ ಕೊಡತಕ್ಕಂತಹ ಕಾಂಪಿಟೆಂಟ್ ಆದಂತಹ ಆಫೀಸರ್ಸ್ ಯಾರು ಮತ್ತು ಯಾವ ಮಾದರಿಯಲ್ಲಿ ಯಾವ ವಿಧಿ ವಿಧಾನಗಳನ್ನು ಅನುಸರಿಸಿ ನೀವು ಲೈಸೆನ್ಸ್‌ಗಳನ್ನು ಕೊಡುತ್ತೀರಿ ಎನ್ನತಕ್ಕಂಥದನ್ನು ದಯವಿಟ್ಟು ಹೇಳುತ್ತೀರೋ?

ಶ್ರೀ ಸಿ. ಗುರುನಾಥ್ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳತಕ್ಕಂತಹ ಪ್ರಶ್ನೆ ಏನು ಇದೆ, ನಮ್ಮ ಇಲಾಖೆಗೆ ಸಂಬಂಧಪಟ್ಟಂತಹ ಅಸಿಸ್ಟೆಂಟ್ ಲೇಬರ್ ಕಮಿಷನರ್ ಇದಕ್ಕೆ ಕಾಂಪಿಟೆಂಟ್ ಆಥಾರಿಟಿ ಆಗಿರುತ್ತಾರೆ. ಗುತ್ತಿಗೆ ಕಾಯಿದೆ ಏನಿದೆ 1970ರ ಕಾಯಿದೆ ಅಡಿಯಲ್ಲಿ ಅವರೆಲ್ಲಾ ಗುತ್ತಿಗೆದಾರರಿಗೆ ಲೈಸನ್ಸ್ ಕೊಡುತ್ತಾರೆ. ಲೈಸನ್ಸ್ ಕೊಟ್ಟ ನಂತರ, ಲೈಸನ್ಸ್ ಕೊಡುವಾಗ ಫಾರಂ ನಂ. 4 ಮತ್ತು ಆ ಕಾರ್ಖಾನೆಯ ಸಂಬಂಧಪಟ್ಟಂತಹ ಮಾಲೀಕರ ಪರವಾಗಿ ಯಾರು ಲೈಸನ್ಸ್ ಕೇಳುವುದಕ್ಕೆ ಇಚ್ಛೆ ಪಡುತ್ತಾರೆ, ಅವರು ಫಾರಂ ನಂ. 4ರಲ್ಲಿ ನಮ್ಮ ಇಲಾಖೆಯ ಕಮಿಷನರ್‌ರವರಿಗೆ ಅರ್ಜಿ ಕೊಡಬೇಕು.

ಆಮೇಲೆ ಅರ್ಜಿ ಕೊಟ್ಟನಂತರ ನಮ್ಮ ಇಲಾಖೆಯ ಕಾರ್ಮಿಕ ಆಯುಕ್ತರು ಫಿಸಿಕಲ್ ಆಗಿ ಆ ಕಾರ್ಖಾನೆಗೆ ಭೇಟಿ ಕೊಟ್ಟು ಅಲ್ಲಿರತಕ್ಕಂಥ ಕಾರ್ಖಾನೆಯ ನಿಯಾಮಾವಳಿ? ಏನಿದೆ, ಕೆಲಸಗಾರರಿಗೆ ಕೊಡತಕ್ಕಂಥ ಸೌಲಭ್ಯ, ಸುರಕ್ಷತೆ ನೀಡುವುದು, ಅವರಿಗೆ ಇಷ್ಟು ಗಂಟೆಗಳ ಕಾಲ ಕೆಲಸ ಕೊಡುವುದು ಹಾಗೂ ಓವರ್ ಟೈಂ ಇವುಗಳನ್ನು ಅನುಸರಿಸಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಿ ಕಾಯಿದೆ ಪ್ರಕಾರ ಅವರಿಗೆ ಲೈಸೆನ್ಸ್ ಕೊಡುತ್ತಾರೆ ಎಂದು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಪ್ರಶ್ನೆ ಹಾಕಿದ ಉದ್ದೇಶವೇನೆಂದರೆ ತಾವು ಉತ್ತರದಲ್ಲಿ ಒಂದು ವಾರದಲ್ಲಿ ಈ ಲೈಸೆನ್ಸ್ ವಿಚಾರದಲ್ಲಿ ಇತ್ಯರ್ಥ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ವಾಸ್ತವಿಕವಾಗಿ ನಡೆಯುತ್ತಿರತಕ್ಕಂಥಾದ್ದು ಏನೆಂದರೆ ಲೈಸೆನ್ಸ್‌ಗಾಗಿ ತಮ್ಮ ಆಫೀಸಿಗೆ ಬಂದರೆ ಸಾವಿರಾರು, ಲಕ್ಷಾಂತರ ರೂಪಾಯಿಗಳು ಖರ್ಚಾಗತಕ್ಕಂಥ ಪರಿಸ್ಥಿತಿ ಇದೆ. ನಿಮ್ಮ ಕಂಡೀಷನ್ಸ್ ಅನ್ನು ಏನು ಫುಲ್‌ಫಿಲ್ ಮಾಡಬೇಕು ಎಂದು ಹಾಕಿದ್ದೀರಿ ಅದನ್ನು ಯಾರೂ ಕೂಡ ಫುಲ್‌ಫಿಲ್ ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಕಂಡೀಷನ್ಸ್ ಇರುವುದರಿಂದ ಅದು ಏನಾಗುತ್ತದೆ ಎಂದರೆ ಅಲ್ಲಿ ಭ್ರಷ್ಟಾಚಾರ ಆಗಲೇಬೇಕಾಗುತ್ತದೆ. ಆ ಪರಿಸ್ಥಿತಿ ಇರುವುದರಿಂದ ನಿಮ್ಮ ಕಂಡಿಷನ್ಸ್‌ನಲ್ಲಿ ಇರತಕ್ಕಂಥಾದ್ದನ್ನು ಏನಾದರೂ ನೀವು ಸಡಿಲ ಮಾಡುವುದಕ್ಕೆ ಸಾಧ್ಯವಿದೆಯೇ? ಅಲ್ಲಿ ವ್ಯಾಪಕವಾಗಿ ನಡೆಯುತ್ತಿರತಕ್ಕಂಥ ಭ್ರಷ್ಟಾಚಾರವನ್ನು ತಗ್ಗಿಸುವುದಕ್ಕೆ ಏನಾದರೂ ಕೂಡ ಚಿಂತನೆ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಸಿ. ಗುರುನಾಥ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಹೇಳುವುದಾದರೆ ಇದರಲ್ಲಿ ಲೈಸೆನ್ಸ್ ಪಡೆಯದೆ ಕೆಲವರಿಗೆ ತೊಂದರೆಯಾಗಿರಬಹುದು. ಇದರಲ್ಲಿ ಹಲವಾರು ಕಾರಣಗಳಿರಬಹುದು. ಷೆಡ್ಯೂಲ್ ನಾಲ್ಕರಲ್ಲಿ ಕೇಳಿರತಕ್ಕಂಥ ವಿಚಾರಕ್ಕೆ ಹಾಗೂ ಲೈಸೆನ್ಸ್ ಪಡೆಯಬೇಕಾದರೆ ಅವರಿಗೆ ಕೆಲವೊಂದು ನಿಯಮಾವಳಿಗಳನ್ನು ಅನುಸರಿಸಬೇಕಾಗುತ್ತದೆ. ಅಲ್ಲಿರತಕ್ಕ ಕಂಡೀಷನ್ಸ್ ಏನಿದೆ ಅದನ್ನು ಫುಲ್‌ಫಿಲ್ ಮಾಡಿದರೆ ಲೈಸೆನ್ಸ್‌ನ್ನು ಬೇಗನೆ ಕೊಡುತ್ತಾರೆ. ಅದರಲ್ಲಿ ಯಾವುದೇ ಅವ್ಯವಹಾರ ಆಗುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ನಿಮ್ಮ ಪ್ರೊಸೀಜರ್ ಏನಿದೆ ಅದು ಬಹಳ ಕಾಂಪ್ಲೀಕೇಟೆಡ್ ಆಗಿರುವುದರಿಂದ ಅದರ ನೆಪ ಮಾಡಿಕೊಂಡು ಬಹಳ ಡಿಲೇ ಮಾಡಿ ಹೆರ್ಯಾಸ್ ಮಾಡುತ್ತಾರೆ ಎಂದು. You examine whether you can further relax those conditions and make the process easier. His intentions are clear.

ಶ್ರೀ ಸಿ. ಗುರುನಾಥ್ : ಆಯಿತು, ಮಾಡುತ್ತೇನೆ.

ಕುಂದಾಪುರ ಭೂ ನ್ಯಾಯ ಮಂಡಳಿಯ ಅಧಿಕಾರಾವಧಿ

2459 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಭೂ ನ್ಯಾಯ ಮಂಡಳಿಯು ಅಧಿಕಾರಾವಧಿ ಮುಕ್ತಾಯಗೊಂಡ ದಿನಾಂಕ ಯಾವುದು;

ಆ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಭೂ ನ್ಯಾಯ ಮಂಡಳಿಯ ಅಧಿಕಾರಾವಧಿ ಮುಕ್ತಾಯಗೊಂಡ ಮೇಲೆ ಯಾವುದಾದರೂ ತೀರ್ಪನ್ನು ನೀಡಲಾಗಿದೆಯೇ ?

ಇ) ಅರ್ಜಿ ನೀಡದೆ ಇದ್ದವರಿಗೆ ಪರವಾಗಿ ಭೂ ನ್ಯಾಯ ಮಂಡಳಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಯ ಮೇಲೆ ತೆಗೆದುಕೊಳ್ಳಲಾಗುವ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಸರ್ಕಾರ ದಿನಾಂಕ 11-10-94ರಂದು ನಿರ್ದೇಶನ ಹೊರಡಿಸಿ, ಯಾವುದೇ ಭೂ ನ್ಯಾಯ ಮಂಡಳಿಗಳು ಕಾರ್ಯವನ್ನು ನಿರ್ವಹಿಸಬಾರದೆಂದು ತಿಳಿಸಿದೆ.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಭೂ ನ್ಯಾಯ ಮಂಡಲಿಯ ಅಧಿಕಾರಾವಧಿ ಮುಕ್ತಾಯಗೊಂಡ ದಿನಾಂಕವನ್ನು ನಾನು ಕೇಳಿದ್ದೆ. ಅದಕ್ಕೆ ಗೌರವಾನ್ವಿತ ಕಂದಾಯ ಸಚಿವರು ಉತ್ತರವಾಗಿ ದಿ: 11.10.94ರಂದು ಸರ್ಕಾರ ನಿರ್ದೇಶನವನ್ನು ಹೊರಡಿಸಿ ಯಾವುದೇ ಭೂ ನ್ಯಾಯ ಮಂಡಲಿಗಳು ಕಾರ್ಯವನ್ನು ನಿರ್ವಹಿಸಬಾರದೆಂದು ತಿಳಿಸಿದ್ದಾರೆ. ಅದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಭೂ ನ್ಯಾಯ ಮಂಡಳಿ ಅಧಿಕಾರಾವಧಿ ಅವಧಿ ಮುಕ್ತಾಯಗೊಂಡ ಮೇಲೆ ಎಂದರೆ ತಾರೀಖು 24.10.94ರಂದು